ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006.

ಸಂಖ್ಯೆ : ಕರಾಮುವಿ/ಅಸಾವಿ/01-14/2022-23 ದಿನಾಂಕ : 19.01.2023

## ದರಪಟ್ಟಿ ಆಹ್ವಾನದ ಬಗೆಗೆ.

ವಿಷಯ :– ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟಿಂಗ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡುವ ಸಂಬಂಧ ದರಪಟ್ಟಿ ಸಲ್ಲಿಸುವ ಬಗೆಗೆ.

ಉಲ್ಲೇಖ :– ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ : 18.01.2023 (ಕಂಡಿಕೆ ಸಂಖ್ಯೆ 14).

*********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟಿಂಗ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಇದಕ್ಕೆ ಸಂಬಂಧಿಸಿದಂತೆ Specifications ಹಾಗೂ ನಿಯಮ ಮತ್ತು ಷರತ್ತುಗಳು ಈ ಕೆಳಕಂಡಂತಿವೆ. ಸದರಿ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆಗಳೊಂದಿಗೆ) ನಮೂದಿಸಿ ದರಪಟ್ಟಿ ಸಲ್ಲಿಸಲು ಕೋರಿದೆ.

### Specifications :

- ಒಳ ಪುಟಗಳನ್ನು 70 GSM 'A' Grade Maplitho White Paper ಉಪಯೋಗಿಸಿ, ಒಂದು ಬಣ್ಣದಲ್ಲಿ ಡಿಜಿಟಲ್ ಪ್ರಿಂಟ್ ಮಾಡಬೇಕಾಗಿರುತ್ತದೆ.
- ರಕ್ಷಾಪುಟಗಳನ್ನು 220 GSM Indian Mat Art Card (ಬಹುವರ್ಣದಲ್ಲಿ ಮುದ್ರಿಸಿ) perfect Binding ಮಾಡಬೇಕಾಗಿರುತ್ತದೆ.

### ನಿಯಮ ಮತ್ತು ಷರತ್ತುಗಳು :

1. ಮುದ್ರಣಕ್ಕೆ ಸಂಬಂಧಿಸಿದ ಅಧ್ಯಯನ ಸಾಮಗ್ರಿಗಳ ಡೆಮಿಯನ್ನು ವಿಶ್ವವಿದ್ಯಾನಿಲಯವೇ ಕಾರ್ಯಾದೇಶದೊಂದಿಗೆ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಬೇಕಾಗುತ್ತದೆ.

2. ಡಿಜಿಟಲ್ ಪ್ರಿಂಟಿಂಗ್ ಸಂಬಂಧಿಸಿದಂತೆ,

| ಕ್ರ. ಸಂ. | ವಿಷಯ | ಅಂದಾಜು ಒಳ ಪುಟಗಳು | ಅಂದಾಜು ರಕ್ಷಾ ಪುಟಗಳು |
|---|---|---|---|
| 1 | UG COURSES | 7494 | 37 |
| 2 | PG COURSES<br>(MA-M COM, M LIB I Sc, & M SC) | 51607 | 421 |
| | ಒಟ್ಟು | **59101** | **458** |

ಮೇಲ್ಕಂಡ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ತಲಾ 03 ಪ್ರತಿಗಳಂತೆ ಮೇಲ್ಕಂಡ Specifications ನಂತೆ ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್‌ನೊಂದಿಗೆ ಸಿದ್ಧಪಡಿಸಿ ಸರಬರಾಜು ಮಾಡಬೇಕಾಗಿರುತ್ತದೆ.

(i) ಒಳಪುಟಗಳ ಡಿಜಿಟಲ್ ಪ್ರಿಂಟ್ (ಒಂದು ಬಣ್ಣದಲ್ಲಿ) ಮುದ್ರಿಸಲು ಒಂದು ಪುಟಕ್ಕೆ ತಗಲುವ ದರ.

(ii) 04 ಪುಟದ ರಕ್ಷಾ ಪುಟಕ್ಕೆ ಬಹುವರ್ಣದಲ್ಲಿ ಮುದ್ರಿಸಲು ಮತ್ತು ಬೈಂಡಿಂಗ್ ಮಾಡಲು ತಗಲುವ ದರ.

ಮೇಲಿನ ದರಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಕನಿಷ್ಠ ದರವನ್ನು (ಎಲ್ಲಾ ತೆರಿಗೆ ಸೇರಿದಂತೆ) ಸೂಚಿಸುವುದು.

3. ಮೇಲ್ಕಂಡ Specifications ನ ರೀತ್ಯಾ ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್‌ನೊಂದಿಗೆ ಸಿದ್ಧಪಡಿಸಿ ಸರಬರಾಜು ಮಾಡಲು ಅತ್ಯಂತ ಕನಿಷ್ಠತಮ ದರವನ್ನು ಎಲ್ಲಾ ತೆರಿಗೆಗಳು ಸೇರಿದಂತೆ ನಮೂದಿಸಿ, ದಿನಾಂಕ : 31/01/2023 ರ ಸಂಜೆ 05 ಗಂಟೆಯೊಳಗೆ ದರಪಟ್ಟಿಯನ್ನು **"ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006"** ಇವರ ಹೆಸರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ತಲುಪಿಸಲು ತಿಳಿಸಿದೆ (ಅಂಚೆ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಜವಾಬ್ದಾರಿಯಾಗಿರುವುದಿಲ್ಲ).

4. ಈ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ನಿಗಧಿಪಡಿಸುವ ದರಗಳು ಇದೇ ವಿಷಯವಾಗಿ ಮತ್ತೊಮ್ಮೆ ದರಪಟ್ಟಿಯನ್ನು ಕರೆಯುವವರೆಗೆ ಚಾಲ್ತಿಯಲ್ಲಿರುತ್ತವೆ.

5. ಒಮ್ಮೆ ದರಪಟ್ಟಿಯನ್ನು ಸಲ್ಲಿಸಿ ಕನಿಷ್ಠತಮ ದರ ನಿಗದಿಯಾದ ನಂತರ ಡಿಜಿಟಲ್ ಪ್ರಿಂಟಿಂಗ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಲು ಸಬೂಬು ನೀಡಿದರೆ ಕಾನೂನು ರೀತ್ಯಾ ಕ್ರಮಕೈಗೊಳ್ಳಲಾಗುತ್ತದೆ.

6. **GST** ನೋಂದಣಿದಾರರಿಗೆ ಮಾತ್ರ ವಿಶ್ವವಿದ್ಯಾನಿಲಯದಲ್ಲಿ ಮುದ್ರಣದ ಕೆಲಸ ನಿರ್ವಹಿಸಲು ಅವಕಾಶವಿರುವುದರಿಂದ **GST** ನೋಂದಣಿದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸುವುದು; ತಪ್ಪಿದ್ದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.

7. ಸದರಿ ದರಪಟ್ಟಿಯನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.

8. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ **"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಡಿಜಿಟಲ್ ಪ್ರಿಂಟಿಂಗ್ / ಬೈಂಡಿಂಗ್ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಕಡ್ಡಾಯವಾಗಿ ಬರೆಯುವುದು.

ಆದೇಶದ ಮೇರೆಗೆ,

20/01/2023

ಕುಲಸಚಿವ

ಪ್ರತಿ :-

1. ಮಾನ್ಯ ಕುಲಪತಿಯವರ ಆಪ್ತಶಾಖೆ, ಕರಾಮುವಿ,
2. ಹಣಕಾಸು ಅಧಿಕಾರಿಗಳು, ಕರಾಮುವಿ,
3. ಕಚೇರಿ ಪ್ರತಿ.